ಈ) ಇದಲ್ಲದೆ ಈಗಾಗಲೇ ನಿಗಮದಲ್ಲಿ ಅಧಿಕ ಸಂಪನ್ಮೂಲಗಳ ಮೇಲ್ವಿಚಾರಣೆ ಮತ್ತು ಕಂದಾಯ ಮೇಲ್ವಿಚಾರಣೆ ಘಟಕಗಳನ್ನು ಸ್ಥಾಪಿಸಿದ್ದು, ಈ ಘಟಕ ಅಧಿಕಾರಿಗಳು ವಿದ್ಯುತ್ ಕಳ್ಳತನವನ್ನು ಪತ್ತೆ ಮಾಡುತ್ತಿದ್ದು, ಈ ಕ್ರಮದಿಂದ ವಿದ್ಯುತ್ ಕಳ್ಳತನ ತಡೆಗಟ್ಟಲು ಸಹ ಅವಕಾಶವಾಗಿದೆ.

ಉ) ಇತ್ತೀಚೆಗೆ ನಿಗಮದಲ್ಲಿ ಪ್ರತಿಯೊಂದು ವೃತ್ತ ಕಛೇರಿಯ ಮಟ್ಟದಲ್ಲಿ ಪುಲಕೇಶಿ ಪಡೆಯೆಂಬ ಒಂದು ವಿಶೇಷ ತಂಡವನ್ನು ಹೊಸದಾಗಿ ಸೃಜಿಸಲಾಗಿದೆ. ಈ ಪಡೆಯು ರಾಜ್ಯಾದ್ಯಂತ ವಿದ್ಯುತ್ ದುರುಪಯೋಗ, ಅನಧಿಕೃತ ವಿದ್ಯುತ್ ಸಂಪರ್ಕ, ಕಳ್ಳತನ ಮುಂತಾದವುಗಳನ್ನು ಪತ್ತೆ ಹಚ್ಚಿ ತನಿಖೆ ನಡೆಸುವುದು ಹಾಗೂ ತಪ್ಪಿತಸ್ಥರ ಮೇಲೆ ಕಾನೂನು ಕ್ರಮಗಳನ್ನು ಜರುಗಿಸುವುದು ಹಾಗೂ ಅನಧಿಕೃತ ಬಳಕೆದಾರರ ವಿದ್ಯುತ್ ಸಂಪರ್ಕವನ್ನು ಕಡಿದು ಹಾಕುವುದು ಮುಂತಾದ ಕ್ರಮ ಕೈಗೊಳ್ಳುತ್ತದೆ.

ವಿದ್ಯುತ್ ಸಾಗಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ತಡೆಗಟ್ಟಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಪ್ರತಿ ವರ್ಷವೂ ನಿಗಮದಲ್ಲಿ ಕೈಗೊಳ್ಳಲಾಗುತ್ತಿದೆ.

1. ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳು ಮತ್ತು ಹೊಸ ವಿದ್ಯುತ್ ಸ್ವೀಕರಣಾ ಕೇಂದ್ರಗಳು ಹಾಗೂ ವಿದ್ಯುತ್ ಉಪ ಕೇಂದ್ರಗಳು ನಿರ್ಮಾಣ ಹಾಗೂ ಹಾಲಿ ಇರುವ ವಿದ್ಯುತ್ ಉಪ ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಳಗೊಳಿಸುವಿಕೆ.

2. ಹಾಲಿ ಇರುವ ವಿದ್ಯುತ್ ಸ್ವೀಕರಣಾ ಕೇಂದ್ರಗಳಲ್ಲಿ ಮತ್ತು ವಿದ್ಯುತ್ ಉಪ ಕೇಂದ್ರಗಳಲ್ಲಿ ಕೆಪಾಸಿಟರ್ ಬ್ಯಾಂಕ್‌ಗಳ ಅಳವಡಿಕೆ.

3. 11 ಕೆ.ವಿ. ವಿದ್ಯುತ್ ಫೀಡರುಗಳಿಗೆ ಕೆಪಾಸಿಟರ್ ಬ್ಯಾಂಕ್‌ಗಳನ್ನು ಅಳವಡಿಸುವುದು.

4. ಹೊಸ 11 ಕೆ.ವಿ. ಎಕ್ಸ್‌ಪ್ರೆಸ್ ಫೀಡರುಗಳ ನಿರ್ಮಾಣ.

5. ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಕಡಿಮೆ ಗಾತ್ರದ ವಿದ್ಯುತ್ ವಾಹಗಳನ್ನು ಹೆಚ್ಚಿನ ಗಾತ್ರದ ವಿದ್ಯುತ್ ವಾಹಕಗಳ ಮೂಲಕ ಬದಲಿಸುವುದು.

6. ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವುದು, ಇವೇ ಮುಂತಾದ ವಿತರಣಾ ವ್ಯವಸ್ಥೆಯನ್ನು ಬಲ ಪಡಿಸುವ ಕಾಮಗಾರಿಗಳನ್ನು ಕೈಗೊಳ್ಳುವುದು.

ಕರ್ನಾಟಕ-ಮಹಾರಾಷ್ಟ್ರ ಗಡಿ ಸಮಸ್ಯೆ:

95 (61) ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕರ್ನಾಟಕ-ಮಹಾರಾಷ್ಟ್ರ ಗಡಿ ಸಮಸ್ಯೆಯ ಇತ್ಯರ್ಥಕ್ಕೆ ಮಹಾರಾಷ್ಟ್ರ ಸರ್ಕಾರವು ಸುಪ್ರೀಂಕೋರ್ಟಿನ ಮೊರೆ ಹೋಗಲು ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ ಕರ್ನಾಟಕ ಸರ್ಕಾರದ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

1) ಇಲ್ಲ.

2) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅಕ್ರಮ ಸಾರಾಯಿ ತಯಾರಿಕಾ ಘಟಕ:

97 (364) ಶ್ರೀ ರಾಮದಾಸ್ (ಕೃಷ್ಣರಾಜ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿ ಅಕ್ರಮ ಸಾರಾಯಿ ತಯಾರಿಕಾ ಘಟಕಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗಿದೆಯೇ;

2) ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಘಟಕಗಳನ್ನು ಈ ಅಕ್ರಮದಲ್ಲಿ ಗುರುತಿಸಲಾಗಿದೆ;

3) ಇಂತಹುಗಳ ಮೇಲೆ ದಾಳಿ ಮಾಡಲಾಗಿದೆಯೇ;

4) ದಾಳಿ ಮಾಡಿದ್ದರೆ ವಶಪಡಿಸಿಕೊಂಡ ಮದ್ಯದ ಬೆಲೆ ಎಷ್ಟು; ಅಕ್ರಮದ ರೂವಾರಿಗಳು ಯಾರು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

1) ಹೌದು.

2) ಅನುಬಂಧ 'ಅ' ದಲ್ಲಿ ತೋರಿಸಿದೆ.

3) ಹೌದು.

4) ವಶಪಡಿಸಿಕೊಂಡ ಮದ್ಯದ ಬೆಲೆ ರೂ. 23,16,394 ಅನುಬಂಧ 'ಅ'ದಲ್ಲಿ ಲಗತ್ತಿಸಿದೆ.

ಅನುಬಂಧ-ಅ

ಕ್ರ. ಸಂ.	ಜಿಲ್ಲೆ	ಘಟಕಗಳ ಸಂಖ್ಯೆ	ಸಾರಾಯಿ ಬೆಲೆ	ರೂವಾರಿಗಳ ವಿವರ
1	2	3	4	5
1.	ಬೆಂಗಳೂರು ನಗರ	ಇರುವುದಿಲ್ಲ		
2.	ಬೆಂಗಳೂರು ಗ್ರಾಮಾಂತರ	7 ಘಟಕಗಳು	18,320	1. ಟಿ.ವಿ. ವಸಂತಬಾಬು, ವಿಜಯಪುರದ ದೇವನಹಳ್ಳಿ.